(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರರವರ ನ್ಯಾಯಾಲಯ ಹೊಸಪೇಟೆ

ಸಂ/ಕಂ/ಪಹಣಿ/ಅಪೀಲು/25/2015-16 ದಿನಾಂಕ:14.06.2016.

## ಹಿಂ ಬ ರ ಹ

ವಿಷಯ: ಹಗರಿಬೊಮ್ಮನಹಳ್ಳಿ ತಾಲೂಕು ಕೋಗಳಿ ಹೋಬಳಿ ಮಾಲವಿ ಗ್ರಾಮದ ಸ.ನಂ.170/ಎ ವಿಸ್ತೀರ್ಣ: 00 ಎಕರೆ 48 ಸೆಂಟ್ಸ್, ಜಮೀನಿಗೆ ಸಂಬಂಧಿಸಿದಂತೆ ಉಪ ತಹಶೀಲ್ದಾರರು, ಕೋಗಳಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಸಂ/ಕಂ/ಪಹಣಿ/ವಿವಾದ/92/2015-16 ದಿನಾಂಕ:03.05.2016 ರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ ಬಗ್ಗೆ.

ಉಲ್ಲೇಖ: ಶ್ರೀ ಎ.ಎಂ.ವಿರುಪಾಕ್ಷಯ್ಯ, ವಕೀಲರು, ಹೊಸಪೇಟೆ ಇವರ ಮನವಿ ದಿನಾಂಕ:07.06.2016.

*****

ಮೇಲ್ಕಾಣಿಸಿದ ವಿಷಯಕ್ಕೆ ಹಗರಿಬೊಮ್ಮನಹಳ್ಳಿ ತಾಲೂಕು ಕೋಗಳಿ ಹೋಬಳಿ ಮಾಲವಿ ಗ್ರಾಮದ ಸ.ನಂ.170/ಎ ವಿಸ್ತೀರ್ಣ: 00 ಎಕರೆ 48 ಸೆಂಟ್ಸ್, ಜಮೀನಿಗೆ ಸಂಬಂಧಿಸಿದಂತೆ ಉಪ ತಹಶೀಲ್ದಾರರು, ಕೋಗಳಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಸಂ/ಕಂ/ಪಹಣಿ/ವಿವಾದ/92/2015-16 ದಿನಾಂಕ:03.05.2016 ವಿರುದ್ಧ ಹಕ್ಕು ಬದಲಾವಣೆಗಾಗಿ ಮೇಲ್ಮನವಿ ಸಲ್ಲಿಸಿರುತ್ತೀರಿ.

ಸದರಿ ಮೇಲ್ಮನವಿಯನ್ನು ಪರಿಶೀಲಿಸಲಾಗಿ, ಸದರಿ ಪ್ರಕರಣದಲ್ಲಿ ವ್ಯಾಜ್ಯದ ಜಮೀನು ಮೂಲ ಪಟ್ಟಾದಾರಳಾದ ಸುಲೋಚನಾಬಾಯಿ ಗಂಡ ವೆಂಕೋಬರಾವು ಮಾಲವಿ ಇವರಿಗೆ ಸೇರಿದ್ದು, ಇವರು ನೋಂದಾಯಿತವಲ್ಲದ ವಿಲ್ಲು ದಸ್ತಾವೇಜಿನ ಪ್ರಕಾರ ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕು ಮಾಲವಿ ಗ್ರಾಮದ ನಿವಾಸಿಯಾದ ಹನುಮಂತರಾವು ತಂದೆ ವೆಂಕೋಬರಾವು ಇವರಿಗೆ ನೀಡಿರುವುದಾಗಿ ಕಂಡು ಬಂದಿರುತ್ತದೆ. ಅದರಂತೆ, ಹಕ್ಕುಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದು, ಮೂಲ ಪಟ್ಟಾದಾರರ ವಂಶಸ್ಥರು ಸಹಿಮಾಡಿರುವುದಿಲ್ಲದ ಕಾರಣ ಎಂ.ಆರ್.ನಂ.:18/2015-16 ವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಉಪ ತಹಶೀಲ್ದಾರರು, ಕೋಗಳಿ ಇವರು ತಮ್ಮ ನ್ಯಾಯಾಲಯದ ಪ್ರಕರಣ ಸಂಖ್ಯೆ: ಸಂ/ಕಂ/ಪಹಣಿ/ವಿವಾದ/92/2015-16 ರ ಮೂಲಕ ವಿಚಾರಣೆ ಕೈಗೊಂಡು ದಿನಾಂಕ:03.05.2016 ರಂದು ನೋಂದಾಯಿತವಲ್ಲದ ವಿಲ್ಲು ದಸ್ತಾವೇಜಿಗೆ ಉದ್ಭವಿಸಿದ ಪ್ರಶ್ನೆಯಾಗಿರುವುದರಿಂದ ಉಭಯ ಪಕ್ಷಗಾರರು ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಳ್ಳಲು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶ ನೀಡಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ವ್ಯಾಜ್ಯದ ಜಮೀನು, ಕುರಿತಂತೆ ನೋಂದಾಯಿತವಲ್ಲದ ವಿಲ್ಲು ದಸ್ತಾವೇಜು ಆಧಾರದ ಮೇಲೆ ಹಕ್ಕುಬದಲಾವಣೆ ಪಡೆದಿರುವುದರ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಸದರಿ ವಿಲ್ಲಿನ ಬಗ್ಗೆ ಉಚ್ಚನ್ಯಾಯಾಲಯ ಬೆಂಗಳೂರು ದಿನಾಂಕ:28.05.2002 G.C.N.ನಾಗೇಂದ್ರಸಿಂಗ್ ವಿರುದ್ಧ ವಿಶೇಷ ಜಿಲ್ಲಾಧಿಕಾರಿ, ಬಳ್ಳಾರಿ ಮತ್ತು ಇತರರು ಪ್ರಕರಣದಲ್ಲಿ ನಿಡಿರುವ ಆದೇಶ ಹಾಗೂ ನಿರ್ದೇಶಗಳನ್ವಯ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬೇಕಾಗಿರುತ್ತದೆ. ಕಾರಣ ತಾವು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ತಿಳಿಸಲಾಗಿದೆ. ಹಾಗೂ ಸದರಿ ಪರಕರಣವನ್ನು ಇದೇ ಹಂತದಲ್ಲಿ ವಿಲೇಗೊಳಿಸಲಾಗಿದೆ.

15/6/16

ಸಹಾಯಕ ಆಯುಕ್ತರು,
ಹೊಸಪೇಟೆ.

**ಇವರಿಗೆ,**

1. ಶ್ರೀ ಎ.ಎಂ.ವಿರುಪಾಕ್ಷಯ್ಯ, ವಕೀಲರು, ಹೊಸಪೇಟೆ ಇವರಿಗೆ